ಇದೆ. ಅದು ಸ್ಥಾಪನೆಯಾಗಿದ್ದುದು 1984-85ರಲ್ಲಿ. ಈವರೆಗೆ ಅಲ್ಲಿ ಸ್ಟೂಡೆಂಟ್ಸ್ 300 ಮಾತ್ರ ಇರುವುದು. ಅದಕ್ಕೆ ನಾನು ಪುನಹ ಯೋಚನೆ ಮಾಡಿ ಅಲ್ಲಿ ನೀಡ್ ಇದ್ದರೆ ಮಾತ್ರ ಇನ್ನೊಂದನ್ನು ಮಾಡಬೇಕು.

ಇಲ್ಲದೆ ಹೋದರೆ ಏನಾಗುತ್ತದೆ ಹೆಚ್ಚು ಹೆಚ್ಚು ಕಾಲೇಜುಗಳನ್ನು ಮಾಡಿ ಅದರಿಂದ ಸರ್ಕಾರಕ್ಕೆ ಹೆಚ್ಚಿನ ಹಣದ ಕೊರತೆ ಬೀಳುತ್ತದೆ. ನಾನು ಕೆಲವು ಕಡೆ ನೋಡಿದ್ದೇನೆ. ಕಾಲೇಜುಗಳು ಇವೆ, ಅಧ್ಯಾಪಕರುಗಳ ಸಂಖ್ಯೆ ಹೆಚ್ಚು ಇದೆ. ಆದರೆ ಮಕ್ಕಳ ಸಂಖ್ಯೆ ಕಡಿಮೆ ಇದೆ. ಈ ರೀತಿ ಆದರೆ wastage of public funds ಆಗುತ್ತದೆ. ಈಗಾಗಲೇ ನೆಲಮಂಗಲದಲ್ಲಿ ಒಂದು ಕಾಲೇಜು ಇದೆ. ಅದು ಪ್ರೈವೇಟ್ ಕಾಲೇಜು. ಸಿದ್ಧಗಂಗಾ ಮಠದವರು ಆ ಕಾಲೇಜನ್ನು ನಡೆಸುತ್ತಿದ್ದಾರೆ. ಆದ್ದರಿಂದ ನೀಡ್ ಇದ್ದರೆ ಮಾತ್ರ ನಾನು ಪುನಃ ನಮ್ಮ ಅಧಿಕಾರಿಗಳಿಗೆ ನೋಡಿ ಎಂದು ಹೇಳಿ ಅದರ ಬಗ್ಗೆ ಯೋಚನೆ ಮಾಡುತ್ತೇನೆ.

ಶ್ರೀ ಆಂಜನಮೂರ್ತಿ:– ಸಿದ್ಧಗಂಗಾ ಕಾಲೇಜು ಒಂದು ಪ್ರೈವೇಟ್ ಕಾಲೇಜು ಎಂದು ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ. ಅಲ್ಲಿ ಇರುವುದು ಆರ್ಟ್ಸ್ ಮತ್ತು ಕಾಮರ್ಸ್, ಬೇರೆ ಕಾಂಬಿನೇಶನ್‌ಗಳು ಇಲ್ಲ. ಆದ್ದರಿಂದ ಪ್ರತಿವರ್ಷ ಸುಮಾರು 1,000 ದಿಂದ 500 ವಿದ್ಯಾರ್ಥಿಗಳು ಮುಂದಿನ ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಬರಬೇಕಾಗಿದೆ. ನೀಡ್ ಇದ್ದರೆ ಪರಿಶೀಲಿಸುತ್ತೇನೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಅಲ್ಲಿ ನೀಡ್ ಇದೆ. ಆದ್ದರಿಂದ ಆದಷ್ಟು ಜಾಗ್ರತೆ ಕಾಲೇಜನ್ನು ಸ್ಥಾಪನೆ ಮಾಡಲು ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ಪ್ರಾರ್ಥಿಸುತ್ತೇನೆ.

ಶ್ರೀ ಎಸ್.ಎಂ. ಯಾಹ್ಯಾ:– ಸಿದ್ಧಗಂಗಾ ಕಾಲೇಜಿನಲ್ಲಿ ಆರ್ಟ್ಸ್ ಮತ್ತು ಕಾಮರ್ಸ್ ಇದೆ, ಬಿ.ಕಾಂ ಇದೆ. ಆದರೆ 300 ಹುಡುಗರು ಮಾತ್ರ ಇದ್ದಾರೆ. ಅಲ್ಲಿ ಸೈಯನ್ಸ್ ಇಲ್ಲ. ಸೈಯನ್ಸ್ ಓಪನ್ ಮಾಡಲು ಅವರಿಗೆ ನಾವು ಪರ್ಮಿಷನ್ ಬೇಕಾದರೆ ಕೊಡುತ್ತೇವೆ.

ಶ್ರೀ ಆಂಜನಮೂರ್ತಿ:– ನಾನು ಕೇಳಿರುವುದು ಕಾಲೇಜನ್ನು

ಹಾಸನ ಜಿಲ್ಲೆಯಲ್ಲಿ ಪಶುವೈದ್ಯಕೀಯ ಆಸ್ಪತ್ರೆಗಳು

316 (1800): ಶ್ರೀ ಬಿ. ಶಿವರಾಮು (ಗಂಡಸಿ):–

ಮಾನ್ಯ ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಾಸನ ಜಿಲ್ಲೆಯಲ್ಲಿ ಒಟ್ಟು ಎಷ್ಟು ಪ್ರಾಥಮಿಕ ಪಶುವೈದ್ಯಕೀಯ ಕೇಂದ್ರ, ಪಶುವೈದ್ಯಕೀಯ ಆಸ್ಪತ್ರೆ, ಸಾಮೂಹಿಕ ಪಶು ಚಿಕಿತ್ಸಾಲಯ ಕೇಂದ್ರಗಳು ಇವೆ ? ಇವುಗಳನ್ನು ಕ್ಷೇತ್ರವಾರು (8ಕ್ಷೇತ್ರಕ್ಕೂ ಸೇರಿದಂತೆ) ಸ್ಥಳದ ಹೆಸರಿನ ಸಹಿತ ಮಾಹಿತಿಯನ್ನೊದಗಿಸುವುದು:

ಆ) ಹಾಸನ ಜಿಲ್ಲೆಯಲ್ಲಿ ಮಂಜೂರಾತಿ ಇಲ್ಲದೆ ನಡೆಯುತ್ತಿರುವ ಒಟ್ಟು ಪಶುವೈದ್ಯ ಆಸ್ಪತ್ರೆ, ಕೇಂದ್ರಗಳೆಷ್ಟು ? ಎಷ್ಟು ವರ್ಷದಿಂದ ನಡೆಯುತ್ತಿವೆ ಮತ್ತು ಅವುಗಳಿಗೆ ಯಾವಾಗ ಮಂಜೂರಾತಿಯನ್ನು ಸರ್ಕಾರ ಕೊಡುವುದು ?) (ಸ್ಥಳದ ಹೆಸರನ್ನು ಒದಗಿಸುವುದು);

ಇ) ಪಶು ಆಸ್ಪತ್ರೆಗಳ ಮಂಜೂರಾತಿಯಲ್ಲಿ ಕ್ಷೇತ್ರವಾರು ವ್ಯತ್ಯಾಸವಿದ್ದರೆ, ವ್ಯತ್ಯಾಸವನ್ನು ಸರ್ಕಾರದ ಮಂಜೂರಾತಿ ಮಾಡುವುದರ ಮೂಲಕ ನ್ಯಾಯ ಒದಗಿಸುವುದೇ ?

ಶ್ರೀ ಕೆ. ಎನ್. ನಾಗೇಗೌಡ (ಪಶು ಸಂಗೋಪನಾ ರಾಜ್ಯ ಸಚಿವರು):–

ಅ) ಪಶುವೈದ್ಯ ಆಸ್ಪತ್ರೆ 8
ಪಶು ಚಿಕಿತ್ಸಾಲಯ 27
ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ 58
ಒಟ್ಟು 93

(ಕ್ಷೇತ್ರವಾರು ವಿವರಗಳನ್ನು ಲಗತ್ತಿಸಿದೆ)

ಆ) ಎ) 5

ಬಿ) 1982 ರಿಂದ ಹಾಸನ ತಾಲ್ಲೂಕಿನ ಕೆ.ಆರ್.ಪುರಂ, 1987ರಿಂದ ಚನ್ನರಾಯಪಟ್ಟಣ ತಾಲ್ಲೂಕಿನ ಬೆಳಘಟ್ಟ
1989ರಿಂದ ಅರಸೀಕೆರೆ ತಾಲ್ಲೂಕಿನ ಆಗ್ಗುಂದ ಮತ್ತು ಕೊಳಗುಂದ. 1990ರಿಂದ ಹಾಸನ ತಾಲ್ಲೂಕಿನ ಕಾರ್ಲೆ

ಸಿ) ಇವುಗಳ ಮಂಜೂರಾತಿಯ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ಡಿ) ವ್ಯತ್ಯಾಸಗಳನ್ನು ಹಂತಹಂತವಾಗಿ ಸರಿದೂಗಿಸಲು ಪ್ರಯತ್ನಿಸಲಾಗುವುದು.

ಹಾಸನ ಜಿಲ್ಲೆಯ ಕ್ಷೇತ್ರವಾರು ಪಶುವೈದ್ಯಕೀಯ ಸಂಸ್ಥೆಗಳ ವಿವರ

ಕ್ಷೇತ್ರದ ಹೆಸರು		ಪಶುವೈದ್ಯ ಆಸ್ಪತ್ರೆ	ಪಶುವೈದ್ಯ ಶಾಲೆ	ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ
1		2	3	4
1.	ಹಾಸನ	ಹಾಸನ	ಮೊಸಳೆ ಹೊಸಳ್ಳಿ ಶಾಂತಿಗ್ರಾಮ ಗೊರೂರು	ಕಂಬಿನಹಳ್ಳಿ ಅಂಕಾಪುರ ಕಟ್ಟಾಯ ದೊಡ್ಡನಗೆರೆ
2.	ಸಕಲೇಶಪುರ	ಸಕಲೇಶಪುರ ಆಲೂರು	ಬಾಳುಪೇಟೆ ರಾಯರಕೊಪ್ಪಲು	ಹೇತೂರು ಪಾಳ್ಯ ಎಸ್ಟೂರು ದೊಡ್ಡ ಕೆಂಗಲ್ ಬೆಳ್ಳೂಡು ಕೆ. ಹೊಸಕೋಟೆ ಹಾನುಬಾಳು ಚನ್ನಹಳ್ಳಿ ಉದೇವಾರ
3.	ಬೇಲೂರು	ಬೇಲೂರು	ಅರೆಹಳ್ಳಿ ಹಳೇಬೀಡು	ಗಂಡೇಹಳ್ಳಿ ಬೇಕನಹಳ್ಳಿ ಚಿಕ್ಕೋಡು ಕೆರಗೋಡು ಹಗರೆ ಗಂಗೂರ

4.	ಶ್ರವಣಬೆಳಗೊಳ	ಚನ್ನರಾಯ ಪಟ್ಟಣ	ನುಗ್ಗೇಹಳ್ಳಿ ಶ್ರವಣ ಬೆಳಗೊಳ ದಿಡಿಗ ಹಿರಿಸಾವೆ ಅಣತಿ ಬಾಗೂರು	ಕೊತ್ತನಘಟ್ಟ ನವಿಲೆ ಜಟ್ಟನಹಳ್ಳಿ ಕಂಬಲು ಸಾತೇನಹಳ್ಳಿ ಕಲ್ಕೆರೆ ರಾಮಪುರ ಮಟ್ಟನಬೆಲೆ
5.	ಗಂಡಸಿ	–	ಗಂಡಸಿ ಬಾಗೇವಾಳ ದುದ್ದ ಜಾವಗಲ್ ಸಾಲಿಗ್ರಾಮ	ಕರಗುಂದ ಕೆಂಕೆರೆ ಯಡವನಹಳ್ಳಿ ಮೆಳಗೋಡು
6.	ಅರಸೀಕೆರೆ	ಅರಸೀಕೆರೆ	ದೊಡ್ಡ ಮೇಟಿಕುರ್ಕಿ ಬಾಣಾವರ	ಬ್ಯಾಡರಹಳ್ಳಿ ಗೊಲ್ಲರಹಟ್ಟಿ ಹಾರನಹಳ್ಳಿ ಜೆ.ಸಿ.ಪುರ ಕಣಕಟ್ಟೆ ಕೊಂಡವಾಗಿಲು ಬೆಳಗುಂಬ ಹಿರಿಯೂರು ಕಲ್ಲುಂಡಿ
7.	ಹೊಳೇ ನರಸೀಪುರ	ಹೊಳೇ ನರಸೀಪುರ	ಹರಿಹರ ಹಳ್ಳಿ ಮೈಸೂರು ಕೆರೆಗೋಡು	ಮಳಲಿ ದೊಡ್ಡಹಳ್ಳಿ ಕುಂದೂರುಮಠ ಅಗ್ರಹಾರ ಗೇಟ್ ದೊಡ್ಡ ಕಾಡನೂರು ದೇವರ ಮುದ್ದನ ಹಳ್ಳಿ ಅತ್ತೀ ಚೌಡೇನಹಳ್ಳಿ ರಂಗೇನಹಳ್ಳಿ ಬಿದರಕ್ಕ ದಂಡಿಗನ ಹಳ್ಳಿ ಕುಂದೂರು ಮಠ ಉದಯಪುರ
8.	ಅರಕಲಗೂಡು	ಅರಕಲಗೂಡು	ಮಲ್ಲಿಪಟ್ಟಣ ಕೊಣನೂರು ರಾಮನಾಥಪುರ	ಮಧುರನಹಳ್ಳಿ ಬೈಜನಹಳ್ಳಿ ದೊಡ್ಡಬೆಮ್ಮತಿ

ಕೇರಳಾಪುರ ಹುಲಿಕಲ್
ಬೆಳವಾಡಿ
ದೊಡ್ಡಮಗ್ಗೆ

ಶ್ರೀ ಬಿ. ಶಿವರಾಮು:–ಮಂಜೂರಾತಿ ಇಲ್ಲದೆ ಹಾಸನ ಜಿಲ್ಲೆಯಲ್ಲಿ 1982ರಿಂದ ಐದು ಪಶು ಚಿಕಿತ್ಸಾ ಕೇಂದ್ರಗಳು ನಡೆಯುತ್ತಿವೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಆ ಹಳ್ಳಿಗಳಲ್ಲಿ ಜಿಲ್ಲಾಪರಿಷತ್ತಿನ ಒಂದು ಬೋರ್ಡ್ ಮಾತ್ರ ಇದೆ. ಕಟ್ಟಡ ಕೂಡ ಗ್ರಾಮದವರೇ ಕಟ್ಟಿಸಿಕೊಟ್ಟಿರುವುದು. ಅಲ್ಲಿ ಸಿಬ್ಬಂದಿ ಇಲ್ಲ, ಡೆಪ್ಯೂಟೇಷನ್ ಮೇಲೆ ವಾರಕ್ಕೆ ಒಂದು ಸಲ ವೈದ್ಯರು ಬಂದು ಹೋಗುತ್ತಾರೆ. ಅಲ್ಲಿ ಔಷಧಿ ವ್ಯವಸ್ಥೆ ಇಲ್ಲ. ಈ ರೀತಿ 82ರಿಂದ ನಡೆಯುತ್ತಿದೆ ಎಂದರೆ ಜನತೆಯ ಒಂದು ಕೆಲಸ ಯಾವ ರೀತಿ ಸಮರ್ಪಕವಾಗಿ ನಡೆಯುತ್ತಿದೆ ಎನ್ನತಕ್ಕಂಥದ್ದು ಯೋಚನೆ ಮಾಡಬೇಕು. ಬರೀ ನಮ್ಮ ಜಿಲ್ಲೆಯಲ್ಲಿ ಈ ಪರಿಸ್ಥಿತಿ ಇದ್ದರೆ ರಾಜ್ಯದ ಉಳಿದ ಭಾಗಗಳಲ್ಲಿ ದನಗಳ ಸಮಸ್ಯೆ ಯಾವ ರೀತಿ ಇದೆ ಎಂಬುದನ್ನು ತಾವು ಊಹಿಸಿಕೊಳ್ಳಬಹುದು. ಇವುಗಳಿಗೆ ಇಲಾಖೆಯವರು ಅಂತಿಮವಾಗಿ ಮಂಜೂರಾತಿ ಕೊಡತಕ್ಕದ್ದು ಅಥವಾ ತೆಗೆಯತಕ್ಕದ್ದು ಮಾಡುತ್ತಾರೆಯೆ? ಎರಡನೆಯದಾಗಿ ಹಾಸನ ಜಿಲ್ಲೆಯಲ್ಲಿ ಕ್ಷೇತ್ರವಾರು ಎಷ್ಟು ಪಶುವೈದ್ಯಕೀಯ ಸಂಸ್ಥೆಗಳು ಇವೆ ಎಂಬ ಮಾಹಿತಿಯನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ಅದರಲ್ಲಿ ವ್ಯತ್ಯಾಸವನ್ನು ಗಣನೀಯವಾಗಿ ಕಾಣಬಹುದು. ಯಾವ, ಆಧಾರದ ಮೇಲೆ ಮಂಜೂರಾತಿ ಮಾಡಿದ್ದಾರೆ. ವ್ಯತ್ಯಾಸಗಳನ್ನು ಹಂತಹಂತವಾಗಿ ಸರಿದೂಗಿಸಲು ಪ್ರಯತ್ನಿಸಲಾಗುವುದು ಎಂದು ಹೇಳಿದ್ದಾರೆ. ಈ ರೀತಿ "ಹಂತಹಂತವಾಗಿ" ಪರಿಶೀಲಿಸುತ್ತೇನೆ ಎಂಬ ಉತ್ತರವು ಪ್ರತಿನಿತ್ಯ ನಮಗೆ ಬರುತ್ತದೆ. ಯಾವ ಯಾವ ಆಧಾರದ ಮೇಲೆ ಎಷ್ಟು ವರ್ಷಗಳಲ್ಲಿ ಮಾಡುತ್ತೀರಿ ಎಂಬ ನಿರ್ದಿಷ್ಟವಾದ ಉತ್ತರವನ್ನು ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ:– ಮಾನ್ಯ ಅಧ್ಯಕ್ಷರೆ, ಅವರ ಎರಡನೆಯ ಪ್ರಶ್ನೆಗೆ ಉತ್ತರವಾಗಿ ಹಾಸನ ಜಿಲ್ಲೆಯಲ್ಲಿ 20 ಲಕ್ಷ 15 ಸಾವಿರ ಪ್ರಾಣಿಗಳು ಇವೆ. ಅದಕ್ಕೆ ಬೇಕಾಗಿರುವುದು 164 ಆಸ್ಪತ್ರೆಗಳು, ಆದರೆ ಅಲ್ಲಿ ಇರತಕ್ಕದ್ದು 94, ಇನ್ನು ಬೇಕಾಗಿರುವ ಆಸ್ಪತ್ರೆಗಳು 71, ಅದ್ದರಿಂದ ನಾವು ಮಾಡಿರತಕ್ಕ ಗೈಡ್‌ಲೈನ್ಸ್ ಪ್ರಕಾರ 5 ಸಾವಿರ ಘಟಕಗಳಿಗೆ ಒಂದು ಆಸ್ಪತ್ರೆ ಎಂದು ಏನು ಮಾಡಿದ್ದೇವೆ ಅದರ ಪ್ರಕಾರ 71 ಶಾರ್ಟೇಜ್ ಇದೆ. ಎಲ್ಲಾ ಕಡೆ ಬೇಡಿಕೆ ಇರುವುದರಿಂದ ನಾವು ಹಂತಹಂತವಾಗಿ ಹಣಕಾಸಿನ ಪರಿಸ್ಥಿತಿ ಇಟ್ಟುಕೊಂಡು ಮಾಡುತ್ತೇವೆ. ಅವರ ಮೊದಲನೆ ಪ್ರಶ್ನೆಗೆ ಉತ್ತರವಾಗಿ ನಾನು ಹೇಳುವುದು ಏನೆಂದರೆ ಐದು ಆಸ್ಪತ್ರೆಗಳನ್ನು ಜಿಲ್ಲಾಪರಿಷತ್‌ನವರು ಮಂಜೂರಾತಿ ಪಡೆಯದೆ ಮಾಡಿದ್ದಾರೆ. ರಾಜ್ಯದಲ್ಲಿ 333 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಜಿಲ್ಲಾಪರಿಷತ್‌ನವರು ಈ ರೀತಿ ಮಂಜೂರಾತಿ ಇಲ್ಲದೆ ಮಾಡಿದ್ದಾರೆ. ಅದಕ್ಕಾಗಿ ಹಣಕಾಸಿನ ಇಲಾಖೆಯವರು ಸಿಬ್ಬಂದಿಯನ್ನು ತೆಗೆದುಕೊಳ್ಳಲು ಅವಕಾಶವನ್ನು ಕೊಟ್ಟಿಲ್ಲ. ಅದುದರಿಂದ ಅದು ನಡೆಯುತ್ತಿಲ್ಲ. ಜಿಲ್ಲಾ ಪರಿಷತ್‌ನವರು ಮಾಡಿರುವುದನ್ನು ಸರ್ಕಾರ ಮಂಜೂರು ಮಾಡಬೇಕೋ ಇಲ್ಲವೋ ಎನ್ನುವುದು ಇನ್ನೂ ಪರಿಶೀಲನಾ ಹಂತದಲ್ಲಿದೆ.

ಶ್ರೀ ಬಿ. ಶಿವರಾಮು:– ಸಿಬ್ಬಂದಿಯನ್ನು ಕೊಟ್ಟಿಲ್ಲ ಎನ್ನತಕ್ಕ ಮಾತನ್ನು ಮಾನ್ಯ ಸಚಿವರು ಹೇಳಿದ್ದಾರೆ. ಈಗ ಹಾಲಿ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು ಏನು ನಡೆಯುತ್ತಿವೆ, ಆ ಕೇಂದ್ರಗಳಲ್ಲಿಯೂ ಕೂಡ ಸಾಕಷ್ಟು ಸಿಬ್ಬಂದಿ ಒದಗಿಸಿಲ್ಲ. ಬಹಳಷ್ಟು ಆಸ್ಪತ್ರೆಗಳಲ್ಲಿ ಬರೀ ಬಾಗಿಲು ತೆಗೆಯುತ್ತಾರೆ. ಅಲ್ಲಿ ಡೆಪ್ಯೂಟೇಶನ್ ಮೇಲೆ ವಾರಕ್ಕೆ ಒಂದು ಸಲ ವೈದ್ಯರು ಬರುತ್ತಾರೆ. ಔಷಧಿ ವ್ಯವಸ್ಥೆ ಇರುವುದಿಲ್ಲ. ಇನ್ನು ಎರಡನೆಯದಾಗಿ ಆಸ್ಪತ್ರೆಗಳನ್ನು ದನದ ಸಂಖ್ಯೆಯ ಆಧಾರದ ಮೇಲೆ

ಮಾಡುತ್ತೇವೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಅದನ್ನು ಇಲ್ಲಿಯವರೆಗೆ ಪರಿಗಣಿಸಿಲ್ಲ. ನನ್ನ ಕ್ಷೇತ್ರದ ತಾಲ್ಲೂಕು ವರದಿ ಪಟ್ಟಿಯನ್ನು ನೋಡಿದರೆ ನಾಲ್ಕು ಗ್ರಾಮಗಳಲ್ಲಿ ಹೆಚ್ಚಿನ ದನಗಳ ಸಂಖ್ಯೆ ಇದ್ದರೂ ಕೂಡ ಈ ಕೇಂದ್ರವನ್ನು ತೆರೆದಿಲ್ಲ. ಆದ್ದರಿಂದ ಅಂಕಿಅಂಶಗಳ ಪ್ರಕಾರ ನೀವು ಮಾಡಿಲ್ಲ. ಯಾವ ಆಧಾರದ ಮೇಲೆ ನೀವು ಮಾಡಿದ್ದೀರಿ ಎಂಬುದನ್ನು ತಿಳಿಸಬೇಕು. ನಮ್ಮಲ್ಲಿ ಹೈನುಗಾರಿಕೆ ವೃತ್ತಿ ಪ್ರಧಾನವಾಗಿರತಕ್ಕದ್ದು. ಅಲ್ಲಿ ಸುಮಾರು 80 ಸೊಸೈಟಿಗಳು ಇವೆ. ಇನ್ನು ಹೆಚ್ಚು ಬರಲಿಕ್ಕೆ ಅವಕಾಶಗಳಿದ್ದರೂ ಸಹ, ಪಶುಚಿಕಿತ್ಸಾ ಕೇಂದ್ರಗಳಿಲ್ಲದೇ ಇರುವುದರಿಂದ ಜನರು ದನಗಳನ್ನು ಸಾಕಲು ಹಿಂದೇಟು ಹಾಕುತ್ತಿದ್ದಾರೆ. ಆದ್ದರಿಂದ ಮುಂದೆ ಇದನ್ನು ಸರಿಪಡಿಸುತ್ತೀರಾ ಎಂಬುದನ್ನು ತಾವು ತಿಳಿಸಬೇಕು.

ಶ್ರೀ ಕೆ.ಎನ್. ನಾಗೇಗೌಡ:– ಮಾನ್ಯ ಅಧ್ಯಕ್ಷರೇ, 1990ರಿಂದ ಇಲ್ಲಿಯವರೆಗೆ ಅನೇಕ ಆಸ್ಪತ್ರೆಗಳಿಗೆ ನಾವು ಸಿಬ್ಬಂದಿಯನ್ನು ಕೊಟ್ಟಿಲ್ಲ. ಅದಕ್ಕೆ ಕಾರಣ ಹಣಕಾಸಿನ ಕೊರತೆ ಎಂದು ನಾನು ಭಾವಿಸಿಕೊಳ್ಳುತ್ತೇನೆ. ಅದಕ್ಕೋಸ್ಕರವೇ 1993-94ರಲ್ಲಿ ನಮ್ಮ ಪಶು ಇಲಾಖೆಗೆ ಪೊಲೀಸ್ ಇಲಾಖೆಗೆ ಮತ್ತು ಆರೋಗ್ಯ ಇಲಾಖೆಗೆ ಈ ಮೂರಕ್ಕೂ ಸಿಬ್ಬಂದಿ ಮೇಲೆ ಆರ್ಥಿಕ ನಿರ್ಬಂಧ ಏನು ತೆಗೆದಿದ್ದಾರೆ, ಅದರಿಂದ 1993-94ಕ್ಕೆ 1900 ಹುದ್ದೆಗಳು ಏನು ಖಾಲಿ ಇವೆ ಅಷ್ಟನ್ನು ಬರುವ ವರ್ಷ ನಾವು ತುಂಬುತ್ತೇವೆ. ಆಗ ಸಮಸ್ಯೆ ಬಗೆಹರಿಯುತ್ತದೆ. ಮತ್ತು ಸಮಸ್ಯೆಲ್ಲಿ 1800 ಆಸ್ಪತ್ರೆಗಳು ಇವೆ. ಇನ್ನು 1200 ಆಸ್ಪತ್ರೆಗಳು ಬೇಕಾಗಿದೆ. ಆ 1200 ಆಸ್ಪತ್ರೆಗಳಲ್ಲಿ 1992-93ಕ್ಕೆ 200 ಆಸ್ಪತ್ರೆಗಳನ್ನು ಮಾಡುತ್ತಿದ್ದೇವೆ, 93-94ಕ್ಕೆ ಮತ್ತೆ 200 ಆಸ್ಪತ್ರೆಗಳನ್ನು ಮಾಡುತ್ತಿದ್ದೇವೆ. ಅದೇ ರೀತಿ ಏನು ಮಾಸ್ಟರ್ ಪ್ಲಾನ್ ಮಾಡಿದ್ದೇವೆ, ಆ ಪ್ರಕಾರ ಮುಂದೆ ಬರುವ 5 ವರ್ಷಗಳಲ್ಲಿ ಇಡೀ ರಾಜ್ಯದಲ್ಲಿ ಎಲ್ಲಾ ಕ್ಷೇತ್ರಗಳಿಗೂ ಮತ್ತು ಮಂಡಲಗಳಿಗೂ ಆಸ್ಪತ್ರೆಗಳನ್ನು ಕೊಡತಕ್ಕಂಥ ಯೋಜನೆ ಮಾಡಲಾಗಿದೆ.

ಪ್ರೌಢಶಾಲೆಗಳಲ್ಲಿ ಹಿಂದಿ ಶಿಕ್ಷಕರಿಲ್ಲದೆ ವಿದ್ಯಾರ್ಥಿಗಳಿಗೆ ತೊಂದರೆ

317 (1863): ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು):–

ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಹಿಂದಿ ವಿಷಯವನ್ನು ಕಡ್ಡಾಯಗೊಳಿಸಿದ್ದು, ಹಿಂದಿ ಶಿಕ್ಷಕರೆ ಇಲ್ಲದೆ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೆ;

ಆ) ಬಂದಿದ್ದರೆ, ಹಿಂದಿ ಶಿಕ್ಷಕರೇ ಇಲ್ಲದೆ ಹಿಂದಿ ವಿಷಯದಲ್ಲಿ ತೇರ್ಗಡೆಯಾಗುವುದಾದರೂ ಕಷ್ಟಕರವೆಂಬುದು ನಿಜವೆ ?

ಡಾ: ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):–

ಅ) ಬಂದಿದೆ.

ಆ) ನಿಜ. 688 ಹಿಂದಿ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎ.ಟಿ. ರಾಮಸ್ವಾಮಿ:– ಸನ್ಮಾನ್ಯ ಅಧ್ಯಕ್ಷರೇ, 1993ನೇ ಏಪ್ರಿಲ್ ತಿಂಗಳಿನಲ್ಲಿ ಏನು ಎಸ್.ಎಸ್.ಎಲ್.ಸಿ. ಪರೀಕ್ಷೆ ನಡೆಯುತ್ತದೆ ಆ ಪರೀಕ್ಷೆಯಲ್ಲಿ ಹಿಂದಿ ವಿಷಯದಲ್ಲಿ ಕಡ್ಡಾಯವಾಗಿ ತೇರ್ಗಡೆಯಾಗಬೇಕು ಎನ್ನುವ ನಿಯಮವನ್ನು ಸರ್ಕಾರ ರೂಪಿಸಿದೆ. ನಿಜ, ಒಕೆಂದರೆ ಹಿಂದಿ ನಮ್ಮ